<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 56/2024**

| ಸಾಕ್ಷಿಯ ಹೆಸರು | ಶ್ರೀ. ಮುರುಳಿಧರ್ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಭೀಮಪ್ಪ ಕೆ.ಟಿ | 1 | 1 |
| ವಯಸ್ಸು | 34 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **20.01.2026.** | |
| ಉದ್ಯೋಗ | ಪಿ.ಎಸ್.ಐ. ರಾಜಗೋಪಾಲನಗರ ಠಾಣೆ | | |
| ವಾಸ ಸ್ಥಳ | ಆಂದ್ರಹಳ್ಳಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿನಾಂಕ 17.07.2020 ರಿಂದ 07.02.2024 ರವರೆಗೆ ಬ್ಯಾಡರಹಳ್ಳಿ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 20.01.2021 ರಂದು ಸಂಜೆ 07.00 ಗಂಟೆ ಸಮಯದಲ್ಲಿ ನಾನು, ಸಿಬ್ಬಂದಿಗಳ ಜೊತೆಗೆ ಗಸ್ತು ಮಾಡುತ್ತಿದ್ದಾಗ ಬಂದ ಮಾಹಿತಿ ಏನೆಂದರೆ ಈಸ್ಟ ವೆಸ್ಟ್ ಕಾಲೇಜ್ ನ ಎದುರು ಜಾಗದಲ್ಲಿ ಯಾರೋ 6 ಹುಡುಗರು ಕೈಯಲ್ಲಿ ದೊಣ್ಣೆ ಮತ್ತು ಮಚ್ಚು ಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ಓಡಾಡುವ ದಾರಿಹೋಕರು ಮತ್ತು ವಾಹನ ಸವಾರರನ್ನು ತಡೆದು ದರೊಡೆ ಮಾಡುವ ಮತ್ತು ಸುಲಿಗೆ ಮಾಡಲು ಹೊಂಚು ಹಾಕುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ನಾವು ಸಿಬ್ಬಂದಿಗಳಾದ ತೀರ್ಥಪ್ರಸಾದ್, ನವೀನ್ ಮತ್ತು ಮಹೇಶ್ ಹಾಗೂ ಪಂಚರಾದ ಶ್ರೇಯಸ್ ಮತ್ತು ಲಿಖಿತ್ ರವರನ್ನು ಬರಮಾಡಿಕೊಂಡು ಖಾಸಾಗಿ ವಾಹನದಲ್ಲಿ ಸಂಜೆ 7.30 ಗಂಟೆಗೆ ಮೇಲೆ ಹೇಳಿದ ಸ್ಥಳಕ್ಕೆ ಹೋಗಿ ನೋಡಿದಾಗ 6 ಜನರು ಕೈಗಳಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡಿದ್ದು ನಾವು 100 ಮೀಟರ್ ದೂರದಿಂದ ನೋಡಿದೆವು.

2. ನಾನು ಮತ್ತು ಸಿಬ್ಬಂದಿ ಸುತ್ತು ವರಿದು 4 ಆಸಾಮಿಗಳನ್ನು ಹಿಡಿದುಕೊಂಡು ಅವರ ಹೆಸರು ವಿಳಾಸ ಕೇಳಲಾಗಿ ವಿಲಿಯಮ್, ರಾಘವೇಂದ್ರ, ಅಯ್ಯಪ್ಪ ಮತ್ತು ವಿನೋದ್ ಎಂದು ಹೇಳಿದ್ದು ಓಡಿ ಹೋದವರ ಹೆಸರು ದೀಪು ಮತ್ತ ಪ್ರದೀಪ್ ಎಂದು ತಿಳಿದು ಬಂತು. ನಾವು ವಶಕ್ಕೆ ಪಡೆದ ವಿಲಿಯಮ್ ಮತ್ತು

ರಾಘವೇಂದ್ರ ಕೈಯಲ್ಲಿ ಲಾಂಗ್, ಅಯ್ಯಪ್ಪ ಮತ್ತು ವಿನೋದ್ ರವರ ಕೈಯಲ್ಲಿ ದೊಣ್ಣೆ ಹಾಗೂ ಖಾರದ ಪುಡಿ ಇತ್ತು. ಅವುಗಳನ್ನು ಪಂಚರ ಮೂಲಕ ಅಮಾನತು ಪಡಿಸಿಕೊಂಡೆವು. ಸದರಿ ಪಂಚಯನ್ನು ಗರ್ಾ ನೋಡುತ್ತಿದ್ದು ಅದನ್ನು ನಿಶಾನೆ.ಪಿ. 1 ಎಂದು ಗುರುತಿಸಲಾಯಿತು ಹಾಗೂ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 1 (ಎ) ಎಂದು ಗುರುತಿಸಲಾಯಿತು. ಪಂಚರಿಗೆ ಕೊಟ್ಟ ನೋಟೀಸ್ ಅನ್ನು ನಿಶಾನೆ.ಪಿ. 2 ಎಂತಲೂ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 2 (ಎ) ಎಂತಲೂ ಗುರುತಿಸಲಾಯಿತು. ಈಗ ಸೀಲ್ಡ್ ಕವರ್ ನಿಂದ ತೆಗೆದು ತೋರಿಸಿದ ಎರಡು ಲಾಂಗ್ ಅನ್ನು ಮು.ಮಾ. 1 ಮತ್ತು 2 ಎಂದು, ಎರಡು ದೊಣ್ಣೆಗಳನ್ನು ಮು.ಮಾ. 3 ಮತ್ತು 4 ಹಾಗೂ ಖಾರದ ಪುಡಿ ಪ್ಯಾಕೇಟ್ ಅನ್ನು ಮು.ಮಾ. 5 ಎಂದು ಗುರುತಿಸಲಾಯಿತು. ರಾತ್ರಿ 8.30 ಕ್ಕೆ ಮಹಜರ್ ಮುಗಿಸಿ ನಂತರ ವಶಕ್ಕೆ ಪಡೆದ ಆರೋಪಿತರು ಮತ್ತು ಮಾಲಿನ ಸಮೇತಾ ಠಾಣೆಗೆ ರಾತ್ರಿ 9.00 ಕ್ಕೆ ವಾಪಸ್ಸು ಬಂದು ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ನಿಶಾನೆ.ಪಿ. 3 ಎಂತಲೂ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 3 (ಎ) ಎಂತಲೂ ಗುರುತಿಸಲಾಯಿತು. ನ್ಯಾಯಲಾಯದ ಮುಂದೆ ಇರುವ ಆರೋಪಿ ರಾಘವೇಂದ್ರನನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿ ವಿಲಿಯಮ್ ಅನ್ನು ನೋಡಿದರ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ.MBM ವಕೀಲರಿಂದ :

ನಾನು ಪ್ರತೀ ದಿನ ಠಾಣೆಗೆ 8.00 ಕ್ಕೆ ಹೋಗಿ ರಾತ್ರಿ 10.00 ಗಂಟೆಯವರೆಗೆ ಇರುತ್ತೇನೆ. ನಾವು ಮಾಗಡಿ ಮುಖ್ಯ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದೆವು. ನಮಗೆ ಮಾಹಿತಿಯನ್ನು ಸಾರ್ವಜನಿಕರು ಫೋನ್ ಮೂಲಕ ಕೊಟ್ಟರು. ಮಾಹಿತಿ ಬಂದ ಸ್ಥಳದಿಂದ ಘಟನಾ ಸ್ಥಳವು ಸುಮಾರು 1.5 ಕಿ.ಮಿ. ದೂರದಲ್ಲಿ ಇದೆ. ನಾನು ನಮ್ಮ ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ಮೌಖಿಕವಾಗಿ ತಿಳಿಸಿದ್ದೆ. ಪಂಚರಿಗೆ ನೋಟೀಸ್ ಅನ್ನು ನಾನೇ ನೀಡಿರುತ್ತೇನೆ. ಸ್ಥಳದಲ್ಲಿ ನೋಟೀಸ್ ಅನ್ನು ತಾಯಾರು ಮಾಡಿ ಕೊಟ್ಟೆ ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ, ಆರೋಪಿತರನ್ನು ಹಾಗೂ ಮು.ಮಾ. ಗಳನ್ನು ವಶಕ್ಕೆ ಪಡೆದಿಲ್ಲ ಹಾಗೂ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸ್ಥಳದಲ್ಲಿ ಯಾವುದೇ ಮಹಜರಿ ಮಾಡಿಲ್ಲ ಎಂದರೆ ಸರಿ ಅಲ್ಲ. ಮಹಜರ್ ಅನ್ನು ಮೇಲಾಧಿಕಾರಿಗಳ ನಿರ್ದೇಶದಂತೆ ತಯಾರು ಮಾಡಿದ್ದೇನೆ ಎಂದರೆ ಸರಿ ಅಲ್ಲ. ಮು.ಮಾ. ಗಳ ಮೇಲೆ ನನ್ನ ಹಾಗೂ ಪಂಚರ ಸಹಿ ಇರುವುದಿಲ್ಲ ಎಂದರೆ ಸರಿ.

**SC No. 56/2024**

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.